ದಿನಾಂಕಃ 26-05-2023

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ- ವಾದಿ ಪರ Sri MCR ವಕೀಲರಿಂದಃ**

ನಾನು 8 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಈ ದಾವೆಯನ್ನು ಚಂದ್ರೇಗೌಡರವರ ಮೇಲೆ ಸಿದ್ದೇಗೌಡರು ಸಲ್ಲಿಸಿರುತ್ತಾರೆ. ಈ ದಾವೆಯನ್ನು ಯಾವ ಉದ್ದೇಶಕ್ಕಾಗಿ ಸಲ್ಲಿಸಲಾಗಿದೆ ಎಂದು ನನಗೆ ಗೊತ್ತಿರುವುದಿಲ್ಲ. ಈ ದಾವೆಯನ್ನು 04 ಎಕರೆ 26 ಗುಂಟೆಗೆ ಸಲ್ಲಿಸಿದ್ದು , ಅದರ ಸರ್ವೆ ನಂಬರ್ ನನಗೆ ಗೊತ್ತಿರುವುದಿಲ್ಲ.

ದಾವಾ ಐಟಂ ನಂ.2 ರ ಸ.ನಂ. 254/3 ಆಗಿರುತ್ತದೆ. ಅದರ ವಿಸ್ತೀರ್ಣ 04 ಎಕರೆ 36 ಗುಂಟೆ ಇರುತ್ತದೆ. ಸದರಿ ಸ್ವತ್ತಿನ ಪೂರ್ವಕ್ಕೆ ರಾಮಕೃಷ್ಣಯ್ಯ ಬಿನ್ ಬಾಲಯ್ಯ, ಪಶ್ಚಿಮಕ್ಕೆ ಮುದ್ದಯ್ಯ ಬಿನ್ ಹಾವಿನ ಮುದ್ದಯ್ಯ, ಉತ್ತರಕ್ಕೆ ಸರ್ಕಾರಿ ಗೋಮಾಳ, ದಕ್ಷಿಣಕ್ಕೆ ಮುದ್ದಯ್ಯ ಬಿನ್ ನಾಗಯ್ಯರವರ ಜಮೀನು ಇರುತ್ತದೆ. ಈ ಜಮೀನಿಗೆ ಹೊಂದಿಕೊಂಡಂತೆ ನನಗೆ ಸೇರಿದ ಯಾವುದೇ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಸರ್ಕಾರಿ ಗೋಮಾಳದ ನಂತರ ನನ್ನ ಜಮೀನು ಇರುತ್ತದೆ ಎಂದು ನುಡಿದಿರುತ್ತಾರೆ.

ನನಗೆ ಕೊಳವೆ ಬಾವಿಗೆ ಸಂಬಂಧಪಟ್ಟ ವಿದ್ಯುತ್ ಸಂಪರ್ಕದ ಸಂಖ್ಯೆಯನ್ನು ಹೇಳಲು ಬರುವುದಿಲ್ಲ. ಸದರಿ ಸ್ವತ್ತಿನಲ್ಲಿ 200 ರಿಂದ 250 ತೆಂಗಿನ ಮರಗಳು ಇದ್ದು , ಅವು ಸುಮಾರು 20 ವರ್ಷ ವಯಸ್ಸಿನ ಮರಗಳಾಗಿರುತ್ತವೆ. ನಾನು ಕ್ರಯಪತ್ರಕ್ಕೆ ಸಾಕ್ಷಿದಾರನಾಗಿ ಸಹಿ ಮಾಡಿರುವುದಿಲ್ಲ

ನನ್ನ ಅಣ್ಣನ ಹೆಸರು ಚಿಕ್ಕಣ್ಣ ಎಂದರೆ ಸರಿಯಲ್ಲ. ನನ್ನ ಅಣ್ಣ ಚಿಕ್ಕಣ್ಣನ ಮಗಳನ್ನು ಈ ದಾವೆಯ 4 ನೇ ಪ್ರತಿವಾದಿಗೆ ಕೊಟ್ಟು ಮದುವೆ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ಚಂದ್ರೇಗೌಡ ಹಾಗೂ ನಾವು ಒಂದೇ ಕುಲಸ್ಥರು ಎಂದರೆ ಸರಿ . ಆದಕಾರಣ, ಅವರಿಗೆ ಸಹಾಯ ಮಾಡಲು 4 ನೇ ಪ್ರತಿವಾದಿ

ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿನ ಬಳಿ ವಾದಿ ಯಾವತ್ತೂ ಬಂದಿರುವುದಿಲ್ಲ ಮತ್ತು ಸ್ವಾಧೀನದಲ್ಲೂ ಇರುವುದಿಲ್ಲ. ಸದರಿ ಸ್ವತ್ತಿನಲ್ಲಿ ಚಂದ್ರೇಗೌಡರವರೇ ಮನೆ ಕಟ್ಟಿಕೊಂಡು ವಾಸ ಮಾಡುತ್ತಿರುತ್ತಾರೆ. ದಾವಾ ಸ್ವತ್ತಿನ ಬಳಿ ನನಗೆ ಯಾವುದೇ ಜಮೀನು ಇರುವುದಿಲ್ಲ ಮತ್ತು ನಾನು ಚಂದ್ರೇಗೌಡರವರೇ ಸ್ವಾಧೀನದಲ್ಲಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಮೀನಿನಲ್ಲಿ ಚಂದ್ರೇಗೌಡರು ಯಾವುದೇ ಮನೆ ಕಟ್ಟಿಕೊಂಡಿರುವುದಿಲ್ಲ ಮತ್ತು ಅಲ್ಲಿ ವಾಸ ಸಹಾ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅವರು 2001 ರಲ್ಲಿ ಮನೆ ಕಟ್ಟಿಕೊಂಡು ವಾಸವಾಗಿರುತ್ತಾರೆ ಎಂದು ನುಡಿದಿರುತ್ತಾರೆ. ನನಗೆ ಚಿಕ್ಕಣ್ಣ ಅಣ್ಣನಾಗಿದ್ದರೂ ಸಹ , ಆತನ ಮಗಳನ್ನು 4 ನೇ ಪ್ರತಿವಾದಿಗೆ ಮದುವೆ ಮಾಡಿ ಕೊಟ್ಟಿದ್ದರೂ ಸಹ ಉದ್ದೇಶಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ–** ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಶಿರಾ.